




# ಸೋದರಿ ನಿವೇದಿತಾ ಭಾಗ ೬

**ಕಥೆ:** ದೇವಪ್ರಸಾದ ಭಟ್ಟಾಚಾರ್ಯ **ಅನುವಾದ:** ಉಷಾ ಎಸ್. ಮೂರ್ತಿ **ಚಿತ್ರ:** ಸುನಿತಾ ವಾಸು




ನಿವೇದಿತಾ ತನ್ನ ಪಾಶ್ಚಾತ್ಯ ಉಡುಗೆಗಳನ್ನು ಬಿಟ್ಟು, ಒಂದು ಸಾಧಾರಣ ಬಿಳಿಯ ನಿಲುವಂಗಿಯನ್ನು ತೊಡುತ್ತಿದ್ದಳು ಮತ್ತು ಸೊಂಟಕ್ಕೆ ಒಂದು ಬಟ್ಟೆಯನ್ನು ಸುತ್ತಿಕೊಳ್ಳುತ್ತಿದ್ದಳು.
ಮತ್ತು ಜಪಮಾಲೆಯನ್ನು ಕೊರಳಲ್ಲಿ ಧರಿಸುತ್ತಿದ್ದಳು.
ನಿವೇದಿತಾ ಭಾರತದ ಒಬ್ಬ ನಾಯಕಿಯಾದಳು.
ಸೇವೆಗಾಗಿ ಜೀವನವನ್ನು ಮುಡಿಪಾಗಿಡುವ ಉದ್ದೇಶದಿಂದ ಇಂಗ್ಲೆಂಡಿನಲ್ಲಿನ ತನ್ನ ಉಜ್ವಲ ಭವಿಷ್ಯದ ಅವಕಾಶಗಳನ್ನು ತ್ಯಜಿಸಿದಳು.
ನಿವೇದಿತಾ ಭಾರತಕ್ಕೆ ಹಿಂದಿರುಗಿದ ಮೇಲೆ ಸ್ವಾಮೀಜಿಯ ಶಿಷ್ಯೆಯಾದ ಅಮೇರಿಕಾದ ಸಿಸ್ಟರ್ ಕ್ರಿಸ್ಟೈನ್ ಕೂಡ ಅವಳೊಂದಿಗೆ ಸೇರಿದಳು.
ಅವರಿಬ್ಬರೂ ಒಂದೇ ಮನೆಯಲ್ಲಿ ವಾಸಿಸುತ್ತಿದ್ದರು. ಮುಂದೆ ಈ ಮನೆ ಸಹೋದರಿಯರ ಮನೆ ಎಂದೇ ಹೆಸರಾಯಿತು. ಕೊನೆಯವರೆಗೂ ನಿವೇದಿತಾ ಈ ಮನೆಯಲ್ಲಿಯೇ ವಾಸಿಸುತ್ತಿದ್ದಳು.


ಅವಳು ಶಾಲೆಯನ್ನು ಪುನರಾರಂಭಿಸುವ ಮುನ್ನ ಸರಸ್ವತಿ
ಪೂಜೆಯನ್ನು ಮಾಡಿದಳು.
ವಿದ್ಯಾಧಿದೇವತೆಯಾದ ಸರಸ್ವತಿಯನ್ನು
ಆರಾಧಿಸಿದಳು.
ನಿನಗೆ ಎಲ್ಲವೂ ಸಿದ್ಧಿಸಲಿ ! ಜಗನ್ಮಾತೆ ನಿನ್ನ
ಮನಸ್ಸು ಬುದ್ಧಿ ಹಾಗೂ ಕೈಗಳಲ್ಲಿ
ನೆಲೆಸುವಂತಾಗಲಿ.
ನಿನಗೆ ಹೆಚ್ಚಿನ ಸಾಮರ್ಥ್ಯ ನೀಡುವಂತೆ ನಾನು
ಜಗನ್ಮಾತೆಯನ್ನು ಪ್ರಾರ್ಥಿಸುತ್ತೇನೆ. ಅದರೊಂದಿಗೆ
ಅಪಾರ ಶಾಂತಿಯೂ ನಿನ್ನದಾಗಲಿ.
ಸಿಸ್ಟರ್ ಕ್ರಿಸ್ಟೈನ್‌ಳ ಜೊತೆಗೂಡಿ
ಮಹಿಳೆಯರ ವಿಭಾಗವೊಂದನ್ನು
ಪ್ರಾರಂಭಿಸಿದಳು.
ಅವರಿಗೆ ಓದಲು ಬರೆಯಲು ಹೇಳಿಕೊಟ್ಟಳು.
ಹೊಲಿಗೆಯಂತಹ ಕುಶಲಕಲೆಗಳಲ್ಲೂ ತರಬೇತಿ
ನೀಡಿದಳು.


ನಿವೇದಿತಾ ತನ್ನ ಶಾಲೆಯನ್ನು ರಾಷ್ಟ್ರೀಯತೆಯ ತಳಹದಿಯಲ್ಲೇ ಬೆಳೆಸಿದಳು.
ವಿದೇಶೀ ಸರ್ಕಾರದಿಂದ ಯಾವ ಸಹಾಯವನ್ನೂ ಅವಳು ಸ್ವೀಕರಿಸಲಿಲ್ಲ.
ಹುಡುಗಿಯರು ಭಾರತೀಯ ಪದ್ಧತಿಯಂತೆ ಕೆಳಗೆ ಮಣೆ ಮತ್ತು ಬರೆಯಲು ಸಣ್ಣ ಮಂಚವನ್ನು ಬಳಸುತ್ತಿದ್ದರು.
ನೀವು ಭಾರತದ ಹೆಣ್ಣುಮಕ್ಕಳು ಎನ್ನುವುದನ್ನು ಮರೆಯಬೇಡಿ !
ಭಾರತೀಯತೆಯನ್ನು ಬಿಂಬಿಸುವ ವರ್ಣಚಿತ್ರಗಳನ್ನೇ ಬರೆಯಿರಿ.
ಮುಂದಿನ ಸಂಚಿಕೆಗೆ..